# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 398 |
| ವಿಧಾನ ಪರಿಷತ್ ಸದಸ್ಯರು | ಶ್ರೀ ಸಿ.ಎನ್.ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19.08.2026 |
| ಉತ್ತರಿಸುವ ಸಚಿವರು | ಉಪ ಮುಖ್ಯಮಂತ್ರಿಗಳು, ಕಂದಾಯ ಹಾಗೂ ಕ್ರೀಡಾ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ವಿವಿಧ ಸರ್ಕಾರಿ ಹುದ್ದೆಗಳ (ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಕೆ.ಪಿ.ಎಸ್.ಸಿ ಸ್ಪರ್ಧಾತ್ಮಕ ಪರೀಕ್ಷೆಗಳು) ನೇಮಕಾತಿಗೆ ಅರ್ಜಿ ಸಲ್ಲಿಸಲು ಲಕ್ಷಾಂತರ ಅಭ್ಯರ್ಥಿಗಳು ಹೊಸದಾಗಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | 'ಒಬ್ಬರಿಗೊಬ್ಬರು' (One-to-One) ಸಂಬಂಧಿತ ಪರಿಶೀಲನೆಯ ಹೊಸ ನಿಯಮಗಳು ಜಾರಿಯಾದ ನಂತರ ಪ್ರತಿಯೊಂದು ಅರ್ಜಿಯ ಸ್ಥಳ ಪರಿಶೀಲನೆ ಹಾಗೂ ದಾಖಲೆಗಳ ಮರು ಪರಿಶೀಲನೆ ಕಡ್ಡಾಯವಾಗಿರುವುದರಿಂದ ಸಕಾಲದಲ್ಲಿ ಪ್ರಮಾಣ ಪತ್ರಗಳು ಸಿಗದೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 'ಒಬ್ಬರಿಗೊಬ್ಬರು' (One-to-One) ಹೊಸ ಸಂಬಂಧಿತ ಪರಿಶೀಲನೆಯ ಹೊಸ ನಿಯಮಗಳು ಯಾವುದು ಜಾರಿಯಾಗಿರುವುದಿಲ್ಲ ಹಾಗೂ ಈ ರೀತಿಯ ನಿಯಮ ಇರುವುದಿಲ್ಲ. |
| (ಇ) | 'ಸಕಾಲ' ಯೋಜನೆಯಡಿ ನಿಗದಿತ ಅವಧಿಯಲ್ಲಿ ಪ್ರಮಾಣ ಪತ್ರಗಳು ದೊರೆಯದೆ ಉದ್ಯೋಗಾಕಾಂಕ್ಷಿಗಳು ಹಾಗೂ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಅವಕಾಶದಿಂದ ವಂಚಿತರಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು: | ಜೂನ್-2026 ರಿಂದ ತಹಲ್‌ವರೆಗೆ ಸಕಾಲ ಅವಧಿ ಒಳಗೆ ವಿಲೇವಾರಿಗೊಳಿಸಿರುವ ಜಾತಿ ಮತ್ತು ಆದಾಯ ಧೃಢೀಕರಣ ಪತ್ರಗಳಿಗೆ ಸಂಬಂಧಿಸಿದ ಅರ್ಜಿಗಳ ಸಂಖ್ಯೆ:34,30,918 ಗಳಾಗಿರುತ್ತದೆ. ಜೂನ್-2026 ರಿಂದ ತಹಲ್‌ವರೆಗೆ ಸಕಾಲ ಅವಧಿ ಮೀರಿ ವಿಲೇವಾರಿಗೊಳಿಸಿರುವ ಜಾತಿ ಮತ್ತು ಆದಾಯ ಧೃಢೀಕರಣ ಪತ್ರಗಳಿಗೆ ಸಂಬಂಧಿಸಿದ ಅರ್ಜಿಗಳ ಸಂಖ್ಯೆ:32,417 ಗಳಾಗಿರುತ್ತದೆ.<br><br>ಪ್ರಸ್ತುತ ಸಕಾಲ ಅವಧಿ ಮೀರಿ ಬಾಕಿ ಉಳಿದಿರುವ ಒಟ್ಟು ಸಂಖ್ಯೆ: 4,308 ಅರ್ಜಿಗಳ ಪೈಕಿ ಒಟ್ಟು 4,014 ಅರ್ಜಿಗಳು 10 ದಿನಗಳಿಗಿಂತ ಸಕಾಲ ಅವಧಿ ಮೀರಿದ್ದಾಗಿರುತ್ತವೆ, ಒಟ್ಟು 243 ಅರ್ಜಿಗಳು 11 ರಿಂದ 20 ದಿನಗಳಿಗಿಂತ ಸಕಾಲ ಅವಧಿ ಮೀರಿದ್ದಾಗಿರುತ್ತವೆ ಹಾಗೂ ಒಟ್ಟು 51 ಅರ್ಜಿಗಳು 20 ದಿನಗಳಿಗಿಂತ ಹೆಚ್ಚು ಅವಧಿ ಮೀರಿದ್ದಾಗಿರುತ್ತವೆ |

| | | |
|---|---|---|
| | | ಸದರಿ 4,308 ಅರ್ಜಿಗಳಲ್ಲಿ 3,826 ಅರ್ಜಿಗಳು ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದ್ದಾಗಿದ್ದು ಇನ್ನುಳಿದಂತೆ ಬಾಕಿ ಉಳಿದಿರುವ ಒಟ್ಟು 482 ಅರ್ಜಿಗಳ ಇತರೆ ಜಿಲ್ಲೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ.<br><br>ಸಕಾಲ ಅವಧಿ ಮೀರಿ ಬಾಕಿ ಉಳಿದಿರುವ ಪ್ರಕರಣಗಳ ಮೇಲೆ ಅಗತ್ಯ ಕ್ರಮಕೈಗೊಳ್ಳಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.<br><br>ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011ರ ಸೆಕ್ಷನ್ 9ರ ಪ್ರಕಾರ, ನಿಗದಿತ ಕಾಲಮಿತಿಯೊಳಗೆ ಸೇವೆ ನೀಡದಿದ್ದಲ್ಲಿ, ವಿಳಂಬಕ್ಕೆ ಕಾರಣರಾದ ಗೊತ್ತುಪಡಿಸಿದ ಅಧಿಕಾರಿ/ಸಂಬಂಧಿತ ಸರ್ಕಾರಿ ನೌಕರರಿಂದ ಪರಿಹಾರ ವೆಚ್ಚ (Compensatory Cost) ವಿಧಿಸಲು ಕ್ರಮವಹಿಸಲಾಗಿರುತ್ತದೆ.. |
| (ಈ) | ಮೈಸೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ತಹಸೀಲ್ದಾರ್ ಕಚೇರಿಗಳಲ್ಲಿ ಸಿಬ್ಬಂದಿ ಕೊರತೆ ಮತ್ತು ಅರ್ಜಿಗಳ ಮಹಾಪೂರದಿಂದಾಗಿ ಉಂಟಾಗಿರುವ ವಿಳಂಬವನ್ನು ನಿವಾರಿಸಲು. ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಆದ್ಯತೆಯ ಮೇಲೆ (Priority) ಪ್ರಮಾಣ ಪತ್ರ ನೀಡಲು ವಿಶೇಷ ಆದೇಶ ಹೊರಡಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು) | ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಆದ್ಯತೆಯ ಮೇಲೆ (Priority) ಪ್ರಮಾಣ ಪತ್ರ ನೀಡಲು ಜಾರಿಗೊಳಿಸಿರುವ FIFO ವ್ಯವಸ್ಥೆಯಿಂದ ತುರ್ತು ಅಗತ್ಯವಿರುವ ಸಂದರ್ಭಗಳಲ್ಲಿ ವೈದ್ಯಕೀಯ ತುರ್ತು ಪರಿಸ್ಥಿತಿ (Medical Emergency), ಉದ್ಯೋಗ / ಶಿಕ್ಷಣ ಸಂಬಂಧಿತ ತುರ್ತು ಅಗತ್ಯ ಪ್ರಕರಣಗಳಡಿ (Employment / Education urgency cases) ಮಾತ್ರ FIFO ವ್ಯವಸ್ಥೆಯಿಂದ ವಿನಾಯಿತಿ ನೀಡುವ ಅಧಿಕಾರವನ್ನು ದಿನಾಂಕ: 25.06.2026 ರಿಂದ ಅಪರ ಜಿಲ್ಲಾಧಿಕಾರಿಗಳಿಗೆ ಹಾಗೂ ಉಪ ವಿಭಾಗಾಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿದೆ. |

**ಸಂಖ್ಯೆ: ಕಂಇ 57 ಎಜೆಎಸ್ 2026**

(ಡಾ. ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು,
ಕಂದಾಯ ಹಾಗೂ ಕ್ರೀಡಾ ಸಚಿವರು